**ಸಾಕ್ಷಿಯನ್ನು ದಿನಾಂಕ 04.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು**

**ಪಾಟೀ ಸವಾಲುಃ 2ನೇ ಎದುರುದಾರರ ಪರ ವಕೀಲರಿಂದಃ**

ನಾನು 2 ವರ್ಷಗಳಿಂದ ಬಿಲ್ಡಿಂಗ್ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದೇನೆ. ಬಿಲ್ಡಿಂಗ್ ಕಂಟ್ರಾಕ್ಟರ್ ಮಾಡಲು ಯಾವುದೇ ಪರವಾನಿಗೆ ಪಡೆದಿಲ್ಲ. ನಾನು ಆದಾಯ ತೆರಿಗೆ ಪಾವತಿ ಮಾಡಿಲ್ಲ. ನಾನು ಇಂಜಿನಿಯರಿಂಗ್ ಪದವಿಯನ್ನು 2016 ರಲ್ಲಿ ಮುಗಿಸಿರುತ್ತೇನೆ. ನಾನು ನಮ್ಮ ಖೋಟನತ್ತಮ್ ಶಾಖೆಯ ಕೆನರಾ ಬ್ಯಾಂಕ್ ನಲ್ಲಿ ಖಾತೆ ಹೊಂದಿದ್ದೇನೆ. ನನಗೆ ಬರುವ ಎಲ್ಲಾ ಆದಾಯವು ಬ್ಯಾಂಕ್ ನಮೂಲಕ ವ್ಯವಹರಿಸುತ್ತೇನೆ ಎಂದರೆ ಸರಿಯಲ್ಲ. ನಗದು ರೂಪದಲ್ಲಿ ಪಡೆದು ಸಹ ವ್ಯವಹಾರ ಮಾಡುತ್ತೇನೆ. ನಾನು ಬಿಲ್ಡಿಂಗ್ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ಯಾವುದೇ ದಾಖಲೆ ಇಲ್ಲ. ನನ್ನ ಕೆನರಾ ಬ್ಯಾಂಕ್ ನ ಖಾತೆಯ ಬ್ಯಾಂಕ್ ಸ್ಟೇಟ್ ಮೆಂಟ್ ನ್ನು ಕೊಡಬಲ್ಲೆ. ನನಗೆ ತಿಂಗಳಿಗೆ ರೂ. 30 ಸಾವಿರ ಆದಾಯ ಇತ್ತು ಎಂದು ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತ ಸ್ಥಳದ ರಸ್ತೆಯ ಅಗಲ 10 -15 ಅಡಿ ಇತ್ತು. ನನ್ನ ದ್ವಿಚಕ್ರ ವಾಹನಕ್ಕೆ ಆಪಾದಿತ ವಾಹನವು ಹಿಂದೆಯಿಂದ ಡಿಕ್ಕಿಪಡಿಸಿತು. ಅಪಘಾತವಾದ ಕಾಲಕ್ಕೆ ಈ ಎರಡು ವಾಹನಗಳು ಬಿಟ್ಟರೆ ಬೇರೆ ಯಾವುದೇ ವಾಹನಗಳು ಇರಲಿಲ್ಲ ಎಂದರೆ ಹೌದು. ಅಪಘಾತ ಸ್ಥಳದಲ್ಲಿ ಬಸ್ ನಿಲ್ದಾಣ ಇದೆ ಎಂದರೆ ಸರಿ. ಬಸ್ ನಿಲ್ದಾಣ ಇರುವ ಕಾರಣ ಯಾವುದೇ ವಾಹನಗಳು ಜೋರಾಗಿ ಹೋಗಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ. ನನ್ನ ದ್ವಿಚಕ್ರ ವಾಹನದಲ್ಲಿ ನಾನು ಒಬ್ಬನೇ ಹೋಗುತ್ತಿದ್ದೆ. ಅಪಘಾತ ಕಾಲಕ್ಕೆ ನಾನು ಹೋಗುತ್ತಿದ್ದ ದ್ವಿಚಕ್ರ ವಾಹನ ನನಗೆ ಸೇರಿದ್ದು. ನಾನು IFFCO ಕಂಪೆನಿಯಲ್ಲಿ ವಿಮೆ ಪಡೆದಿದ್ದೇನೆ. ವಿಮೆ ಮತ್ತು ಆರ್.ಸಿ. ಪುಸ್ತಕವನ್ನು ನ್ಯಾಯಾಲಯಕ್ಕೆ ಕೊಡಬಲ್ಲೆ. ನಾನು ಅಪಘಾತ ಕಾಲಕ್ಕೆ ಹೆಲ್ಮೆಟ್ ಧರಿಸಿಲ್ಲ ಎಂದರೆ ಸರಿಯಲ್ಲ. ನಾನು ಹೋಗುತ್ತಿದ್ದಂತಹ ಸ್ಥಳಕ್ಕೂ ಮತ್ತು ಮಣ್ಣಿನ ರಸ್ತೆಗೂ ಸುಮಾರು 3 ಅಡಿ ಅಂತರ ಇತ್ತು. ನಾನು 20 ಕಿ.ಮೀ ವೇಗದಲ್ಲಿ ಹೋಗುತ್ತಿದ್ದೆ. ಅಪಘಾತವಾದ ರಸ್ತೆಯು ಮುಖ್ಯ ರಸ್ತೆ ಆಗಿರುವ 20 ಕಿ.ಮೀ ವೇಗದಲ್ಲಿ ಹೋಗುತ್ತಿದ್ದರಿಂದ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವಾದ ನಂತರ ನನಗೆ ಪ್ರಜ್ಞೆ ಇರಲಿಲ್ಲ. ಮಣಿಪಾಲ್ ಆಸ್ಪತ್ರೆಯಲ್ಲಿ ನನಗೆ ಪ್ರಜ್ಞೆ ಬಂತು. ನನಗೆ ಮಣಿಪಾಲ್ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆಯನ್ನು ಪಡೆದು , ತದನಂತರ ಅರುಣ್ ಆರ್ಥೋ , ಹೊಸೂರು ಆಸ್ಪತ್ರೆಗೆ ಹೋಗಿರುತ್ತೇನೆ. ನಾನು ಸಂಪೂರ್ಣ ಚಿಕಿತ್ಸೆಯನ್ನು ಅರುಣ್ ಆರ್ಥೋ ಆಸ್ಪತ್ರೆಯಲ್ಲಿ ಪಡೆದೆ. ಆಸ್ಪತ್ರೆಯಲ್ಲಿ ವೈದ್ಯರು ನನಗೆ ಗಾಯಗಳು ಯಾವ ರೀತಿ ಆಗಿರುತ್ತದೆ ಎಂದು ಕೇಳಿರುತ್ತಾರೆ ಅವರಿಗೆ ಅಪಘಾತದಿಂದ ಆಗಿರುತ್ತದೆ ಎಂದು ಎರಡು ಆಸ್ಪತ್ರೆಯಲ್ಲಿ ತಿಳಿಸಿರುತ್ತೇನೆ, ಅವರು ನನ್ನ ಹೇಳಿಕೆಗಳಿಗೆ ಸಹಿಯನ್ನು ಸಹ ಪಡೆದರು. ಸದರಿ ಹೇಳಿಕೆಗಳನ್ನು ಈಗಾಗಲೇ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ಆ ರೀತಿ ಯಾವುದೇ ಹೇಳಿಕೆಗಳನ್ನು ನ್ಯಾಯಾಲಯಕ್ಕೆ ನೀಡಿಲ್ಲ ಎಂದರೆ ಸರಿ. ಮುಂದುವರೆದು ನನ್ನ ಬಳಿ ಯಾವುದೇ ಹೇಳಿಕೆಗಳನ್ನು ಪಡೆದುಕೊಂಡಿಲ್ಲ, ಸಹಿ ಮಾಡಿರುತ್ತೇನೆ. ಅಪಘಾತದ ಬಗ್ಗೆ ಮಾಹಿತಿ ತಿಳಿದ ನಂತರ ಕೂಡಲೇ ನನ್ನಹೆಂಡತಿ ಆಸ್ಪತ್ರೆ ಗೆ ಬಂದರು, ತದನಂತರ

ನನ್ನ ತಾಯಿ ಬಂದರು. ನನ್ನ ಕುಟುಂಬದವರಿಗೆ ಅಪಘಾತದ ವಿಚಾರ ಗೊತ್ತಾದ ಕೂಡಲೇ ದೂರನ್ನು ಕೊಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಆಸ್ಪತ್ರೆಯಲ್ಲಿ ಅವರು ನನ್ನನ್ನು ನೋಡಿಕೊಂಡು ಇದ್ದರು, ಅವರು ಕೂಡಲೇ ದೂರನ್ನು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ನಾನು ಆಸ್ಪತ್ರೆಯಿಂದ ದಿಃ04.09.2024 ರಂದು ಬಿಡುಗಡೆ ಆದೆ. ದಿಃ19.09.2024 ರಂದು ದೂರನ್ನು ನನ್ನ ಹೆಂಡತಿಯ ತಮ್ಮ ಕೊಟ್ಟನು. ನಾನು ಪೊಲೀಸ್ ದಾಖಲೆಗಳನ್ನು ನೋಡಿದ್ದೇನೆ. ಅಪಘಾತವಾದ 15 ದಿನಗಳ ನಂತರ ದೂರನ್ನು ಕೊಟ್ಟೆವು, ಆದರೆ ದಿನಾಂಕ ನೆನಪಿಲ್ಲ. ನನ್ನ ಹೆಂಡತಿ ಆಕೆಯ ತಮ್ಮನಿಗೆ ದೂರನ್ನು ಕೊಡಲು ತಿಳಿಸಿರುತ್ತಾರೆ .ಅಪಘಾತವು ನನ್ನ ತಪ್ಪಿನಿಂದ ಆದ ಕಾರಣ ಅಪಘಾತವಾದ ಕೂಡಲೇ ದೂರನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆದ ಕಾರಣ ನನ್ನ ಹೆಂಡತಿಯು ಸಹ ಯಾವುದೇ ದೂರನ್ನು ಕೊಡಲಿಲಲ್ಲಎಂದರೆ ಸರಿಯಲ್ಲ. ತದನಂತರ ನಾನು ನಾನ1ನೇ ಎದುರುದಾರು ಮತ್ತು ಪೊಲೀಸರೊಂದಿಗೆ ಶಾಮೀಲಾಗಿ ಸುಳ್ಳು ದೂರು ಸೃಷ್ಟಿಸಿ , ಸುಳ್ಳು ಪೊಲೀಸ್ ದಾಖಲೆಗಳನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತವಾದ ಒಂದು ತಿಂಗಳನಂತರ ನಾನೇ ಠಾಣೆಗೆ ಹೋಗಿ ಹೇಳಿಕೆಯನ್ನು ಕೊಟ್ಟಿದ್ದೇನೆ. ಅಪಘಾತದಿಂದ ನನಗೆ ಎಡ ತೊಡೆಯಲ್ಲಿ ಮೂಳೆ ಮುರಿತ ಆಗಿರುತ್ತದೆ ಎಂದರೆ ಸರಿ. ಒಳಜೋಡಣೆಗಳನ್ನು ಇನ್ನು ಒಳಗೆ ಇದೆ. ಮೂಳೆ ಮುರಿತ ಇನ್ನು ಜೋಡಣೆ ಆಗಿಲ್ಲ. ಇನ್ನೊಂದು ಶಸ್ತ್ರ ಚಿಕಿತ್ಸೆ ಬೇಕಾಗಿಲ್ಲ, ಆದರೆ ಮೊದಲಿನಂತೆ ಈಗ ನಡೆಯಲು ಆಗುವುದಿಲ್ಲ. ನನಗೆ ಆಗಿರುವಂತಹ ಮೂಳೆ ಮುರಿತ ಗಾಯವು ಸಂಪೂರ್ಣವಾಗಿ ಜೋಡಣೆಯಾಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆ ಆದ ನಂತರ ಮುಂದುವರೆದ ಚಿಕಿತ್ಸೆಗೆ ಸುಮಾರು 10 ಬಾರಿ ಹೋಗಿರುತ್ತೇನೆ. ಮುಂದುವರೆದ ಚಿಕಿತ್ಸೆಯ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡಬಲ್ಲೆ. ನಾನು ವೈದ್ಯಕೀಯ ಬಿಲ್ಲುಗಳನ್ನು ಹೆಚ್ಚಿನ ಪರಿಹಾರ ಪಡೆಯಲು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಆರೋಗ್ಯ ವಿಮೆ ಹೊಂದಿಲ್ಲ. ಆಪಾದಿತ ವಾಹನದ ಮಾಲೀಕ ಸಂಪೂರ್ಣ ವೈದ್ಯಕೀಯ ಬಿಲ್ಲುಗಳನ್ನು ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಆಪಾದಿತ ವಾಹನದ ಮಾಲೀಕ ಸಂಪೂರ್ಣ ವೈದ್ಯಕೀಯ ಬಿಲ್ಲುಗಳನ್ನು ಪಾವತಿಸಿದ್ದರೂ ಸಹ ಪುನಃ ನಾನು ಅವುಗಳನ್ನು ಕ್ಲೇಮ್ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ಈಗಲೂ ನಾನು ಬಿಲ್ಡಿಂಗ್ ಕಂಟ್ರಾಕ್ಟರ್ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮೊದಲಿನಂತೆಯೇ ಕೆಲಸ ಮಾಡುತ್ತಿದ್ದರೂ ಸಹ ಪರಿಹಾರ ಪಡೆಯಲು ಸುಳ್ಳು ದಾಖಲಾತಿಗಳನ್ನು ಸೃಷ್ಟಿ ಮಾಡಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ- ಇಲ್ಲ**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ.)**

**(ಓ. ಹೇ. ಕೇ. ಸ. ಇ)**

**2ನೇ ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು, ಬೆಂಗಳೂರು.**